ಅಪ್ಪನಿಗೆ ಅದಿನ್ನೆಷ್ಟು ನೋವಾಗುತ್ತೋ ಎಂಬುದನ್ನು ನೆನೆದೇ ಬೆವರಿಹೋದೆ. ಈ ಭಯದಲ್ಲೇ ಅಪ್ಪನನ್ನು ಸುಮ್ಮನೇ ಸಾಯಲು ಬಿಟ್ಟು ಬಂದ ಕಷ್ಟವನ್ನು ಹಾಗೇ ಅನುಭವಿಸುವುದೇ ಸುಖವೆಂದು ಅನ್ನಿಸದಿರಲಿಲ್ಲ.

ಅಪ್ಪನಿಗೆ ಕಿಮೋಥೆರಪಿ ಆದಾಗೆಲ್ಲಾ ಅವರು ತುಂಬಾ ಬಳಲಿದಂತೆ ಕಂಡುಬರುತ್ತಿದ್ದರು. ಸಾಯುವುದೇ ಸುಖವೆಂದು ಅವರಿಗೂ ಅನ್ನಿಸಲಾರಂಭಿಸಿರಬೇಕು. ಆದರೆ ಅಪ್ಪ ಡಾಕ್ಟರು. ಸಾಯಲು ಮನಸ್ಸು ಮಾಡುವವರಲ್ಲ, ಅವರದೇನಿದ್ದರೂ ಬದುಕಿನ ಬಗೆಗಿನ ಹೋರಾಟ. ಆದರೆ ಅಮ್ಮನೇ ಎಲ್ಲವನ್ನೂ ಸರಿದೂಗಿಸುವಲ್ಲಿ ಬಳಲಿದಂತೆ ಕಂಡುಬರುತ್ತಿದ್ದಳು. ಒಂದು ಕಡೆ ತನ್ನದೆಲ್ಲ ಸುಖವನ್ನೂ ಮರೆತು ನಿರಂತರ ಅಪ್ಪನ ಸೇವೆ. ಅವರಿಗೆ ಒಂದಿನಿತೂ ದೂಳು, ಕಲುಷಿತ ನೀರು ಆಗಿಬರುತ್ತಿರಲಿಲ್ಲ. ಅವರು ಉಸಿರಾಡುತ್ತಿದ್ದ ಅಷ್ಟೂ ಗಾಳಿ ಏರ್‌ಕಂಡೀಷನ್‌ದೇ ಆಗಿರಬೇಕಿತ್ತು, ಅವರು ಕುಡಿವ ಅಷ್ಟೂ ನೀರು ಮಿನರಲ್ ವಾಟರ್ರೇ ಆಗಿರಬೇಕಿತ್ತು. ಮನೆಯಿಂದ, ಆಸ್ಪತ್ರೆಯಿಂದ ಹೊರಬರಬೇಕಾದರೆ ಎರಡು ನಿಮಿಷ ಮಾಸ್ಕ್ ಹಾಕಿಕೊಂಡಿರುತ್ತಿದ್ದುದು ಬಿಟ್ಟರೆ ಸದಾ ಎ.ಸಿ.ಯಲ್ಲೇ ಇರಬೇಕಾಗಿತ್ತು. ಅಪ್ಪನಿಗೆ ಕೊಡುತ್ತಿದ್ದ ಆಹಾರವನ್ನೂ ಸಹ ಬಿಸ್ಲೆರಿ ನೀರಿನಿಂದಲೇ ಮಾಡಬೇಕಾಗುತ್ತಿತ್ತು. ಇಂತಿಪ್ಪ ಪರಿಗೆ ಅದೆಷ್ಟು ಹಣ ಬೇಕು? ಅದರಲ್ಲೂ ಅಪ್ಪ ಸದ್ಯ ದುಡಿಯುತ್ತಿಲ್ಲ!



ಪ್ರತಿದಿನ ಸೊಟ್ಟೋಗೆ ಫೋನ್ ಮಾಡಿ ವಿಚಾರಿಸುವುದು, ಯಾರಾದರೂ ಡೋನರ್ ಸಿಕ್ಕರಾ? ಇವತ್ತಿನ ನಮ್ಮ ಸೀರಿಯಲ್ ನಂಬರ್ ಎಷ್ಟು? ಯಾರಾದರೂ ರೋಗಿಗಳು ಸತ್ತು ನಮ್ಮ ನಂಬರ್ ಮೇಲೆ ಬಂತಾ? ಅಪಘಾತದಲ್ಲಿ ಯಾರದಾದರೂ ಹೆಡ್ ಇಂಜುರಿಯಾಗಿ ಮೆದುಳು ನಿಷ್ಕ್ರಿಯವಾಗಿ, ಅವರ ಮನೆಯವರು ಅಂಗಾಂಗದಾನಕ್ಕೆ ಒಪ್ಪಿದ್ರಾ? ಬರೀ ಇವೇ ಪ್ರಶ್ನೆಗಳು. ಇನ್ನೊಂದು ಕಡೆ ಚಿಕ್ಕಪ್ಪ ಸಂಭ್ರಮ್ ಕಡೆಯಿಂದ ಹೈಕೋರ್ಟ್‌ಗೆ ಅರ್ಜಿ ಹಾಕಿಸಿ ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಕೋರುವ ಪ್ರಯತ್ನ...

ನನಗೆ ಹದಿನೆಂಟು ತುಂಬಲು ಇನ್ನೂ ಒಂದು ವರ್ಷ ಬೇಕು, ಕೋರ್ಟ್ ಅರ್ಜಿ ವಿಚಾರಣೆಗೆ ಬಂದು ನಾವೆಲ್ಲ ಒಪ್ಪಿ ಆದೇಶ ನೀಡಲು ಕನಿಷ್ಠ ಅದಕ್ಕೂ ಒಂದು ವರ್ಷ ಬೇಕಾದೀತು. ಆದರೆ ಡಾಕ್ಟರ್ರು ಅಪ್ಪನಿಗೆ ನೀಡಿರುವ ಅವಧಿ ಕೇವಲ ಮೂರೇ ತಿಂಗಳು...

ಅಪ್ಪನಿಗೆ ಡೋನರ್ ಕೊನೆಗೂ ಸಿಗಲೇ ಇಲ್ಲ. ಡಾಕ್ಟರ್ ಹೇಳಿದ ಅವಧಿ ಮೀರುತ್ತಾ ಬಂದು ಇನ್ನೇನು ಅವರು ಅವಸಾನದ ಅಂಚಿಗೆ ತಲುಪಿಯೇ ಬಿಡುತ್ತಾರೆ ಎಂಬ ಭಯ ನನ್ನನ್ನು ಆವರಿಸಲಾರಂಭಿಸಿತು. ಅಮ್ಮ ಹಣಕ್ಕೆ ಪಡುತ್ತಿರುವ ಪಾಡಂತೂ ನನ್ನ ಕಣ್ಣೆದುರಿಗೇ ಇತ್ತು. ಸದ್ಯ, ಲಾಯರ್ ಚಿಕ್ಕಪ್ಪನೇ ಆಗಿದ್ದರಿಂದ ಅವರಿಗೆ ಲಾಯರ್ ಫೀಸ್ ಕೊಡುವ ಅಗತ್ಯವಿರದಿದ್ದುದರಿಂದ ಅದರಿಂದ ಸ್ವಲ್ಪ ವಿನಾಯಿತಿ ಸಿಕ್ಕಿತ್ತು ಅಷ್ಟೇ. ಇಲ್ಲಾಂದರೆ ಅದೂ ಮತ್ತೊಂದು ಹೊರೆಯಾಗಿರುತ್ತಿತ್ತು. ಅಲ್ಲದೆ ಇನ್ನು ಕೆಲವೇ ವರ್ಷಗಳಲ್ಲಿ ಇನ್ನೂ ಮದುವೆಯಾಗಿರದ ಚಿಕ್ಕಪ್ಪನಿಗೂ ಇದೇ ರೀತಿಯ ಆಪರೇಷನ್‌ಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ ಎಂಬ ಕಟುಸತ್ಯ ಕಣ್ಣೆದುರಿಗೇ ಇತ್ತು. ಅಪ್ಪ ಒಂದು ವೇಳೆ ಉಳಿಯದೇ ಹೋದರೆ ಅಮ್ಮ ಇವೆಲ್ಲವನ್ನೂ ಹೇಗೆ ನಿಭಾಯಿಸುತ್ತಾಳೆ. ಅಲ್ಲದೆ ನಾವಿಬ್ಬರೂ ಹೆಣ್ಣುಮಕ್ಕಳು, ನಮ್ಮ ಮದುವೆ, ಮುಂಜಿ ಇತ್ಯಾದಿಗಳ ಹೊರೆ ಬೇರೆ... ದಿನಾಲೂ ನ್ಯೂಸ್‌ಪೇಪರ್ ಓದುವಾಗಲೆಲ್ಲಾ ಬರೀ ಇವೇ ಸುದ್ದಿಗಳೇ ನನ್ನನ್ನು ಸೆಳೆಯುತ್ತಿದ್ದವು. ಯಾರಾದರೂ ಕಾಲೇಜು ಯುವಕರು ಬೈಕ್‌ನಲ್ಲಿ ಬಿದ್ದರಾ, ಅವರ ತಲೆ ನುಚ್ಚುನೂರಾಯಿತಾ, ಅವರ ಅಂಗಾಂಗಗಳು ದಾನ ಮಾಡಲ್ಪಟ್ಟವಾ? ಆಗಲೇ ಒಂದು ಘಟನೆ ನನ್ನನ್ನು ಬಹುವಾಗಿ ಕಾಡಿದ್ದು. ಅದು, ನನ್ನದೇ ಕಾಲೇಜು ಕ್ಯಾಂಪಸ್‌ನಲ್ಲಿದ್ದ ಎಂಬಿಬಿಎಸ್ ವಿದ್ಯಾರ್ಥಿನಿ ಸ್ನಾನ ಮಾಡುವಾಗ ಬಚ್ಚಲು ಮನೆಯಲ್ಲೇ ಸತ್ತುಹೋದ ವಿಷಯ...

***

ಕ್ರಮೇಣ ನಾನು ಒಂದು ಸ್ಪಷ್ಟ ನಿರ್ಧಾರಕ್ಕೆ ಬರಲಾರಂಭಿಸಿದೆ. ನನ್ನೊಬ್ಬಳ ತ್ಯಾಗದಿಂದ ಅಪ್ಪ ಬದುಕುಳಿಯುತ್ತಾರೆ... ಅಮ್ಮನಿಗೆ ಹಣಕಾಸಿನ ತೊಂದರೆಯೂ ಆಗುವುದಿಲ್ಲ... ನನ್ನ ಮದುವೆಯ ಖರ್ಚೂ ಉಳಿಯುತ್ತದೆ...

ಅಮ್ಮ ಅಪ್ಪನಿಗೆ ಊಟ ತೆಗೆದುಕೊಂಡು ಆಸ್ಪತ್ರೆಗೆ ಹೋಗಿದ್ದಳು. ಚಿಕ್ಕಪ್ಪ ಕೋರ್ಟ್‌ಗೆ ಹೋಗಿದ್ದರು. ಅಮೂಲ್ಯ ಕಾಲೇಜಿಗೆ ಹೋಗಿದ್ದಳು. ಮನೆಯಲ್ಲಿ ಯಾರೂ ಇರಲಿಲ್ಲ. ಬಚ್ಚಲು ಮನೆಗೆ ಹೋಗಿ ಗ್ಯಾಸ್ ಗೀಜರ್ ಆನ್ ಮಾಡಿ ಬಿಸಿನೀರು ಬಿಡಲಾರಂಭಿಸಿದೆ. ಕಿಟಕಿಯನ್ನು ಭದ್ರಪಡಿಸಿದೆ. ಸುಲಭವಾಗಿ ತೆರೆಯಲು ಬರಲಿ ಎಂದೇ ಬಾಗಿಲಿಗೆ ಬೋಲ್ಟ್ ಹಾಕಲಿಲ್ಲ. ಒಂದು ವೇಳೆ ಯಾರಾದರೂ ಬಂದರೂ ನೀರಿನ ಸದ್ದಿನಿಂದಲೇ ಸ್ನಾನ ಮಾಡುತ್ತಿರುವೆನೆಂಬ ಕುರುಹು ಸಿಗಬೇಕು, ಹಾಗೆ ಯೋಜಿಸಿದ್ದೆ. ಸಾದ್ಯಂತ ಬರೆದಿದ್ದ ಒಂದು ಪತ್ರವನ್ನು ಮೂಲೆ ಸ್ಟಾಂಡಿನ ಮೇಲಿಟ್ಟೆ. ಅದರಲ್ಲಿ ಹೀಗೆ ಬರೆದಿದ್ದೆ: 'ನನ್ನ ಸ್ವಇಚ್ಛೆಯಿಂದ ಅಂಗಾಂಗದಾನ ಮಾಡುತ್ತಿದ್ದೇನೆ. ಅಪ್ಪನಿಗೆ ಯಕೃತ್ತನ್ನು ಕಸಿ ಮಾಡಿ ಉಳಿದ ಅಗತ್ಯವುಳ್ಳವರಿಗೆ ಕಣ್ಣು, ಹೃದಯ, ಮೂತ್ರಪಿಂಡ, ಪ್ಯಾಂಕ್ರಿಯಾಸ್, ಕರುಳು, ಚರ್ಮ ಇತ್ಯಾದಿಗಳನ್ನು ನೀಡಿ...'

ಕ್ರಮೇಣ ಮಂಪರು ಕವಿಯಲಾರಂಭಿಸಿತು. ಒಂದು ಕ್ಷಣ, ಕಾರ್ಬನ್ ಮೋನೋಕ್ಸೈಡ್‌ನ ಉಸಿರಾಟದಿಂದಾಗಿ ಲಿವರ್‌ಗೆ ಏನಾದರೂ ಅಪಾಯವಾಗಿ ಅಪ್ಪನಿಗೆ ಸಿಗದಂತಾಗಿಬಿಟ್ಟರೆ ಎಂಬ ಆತಂಕ ಮೂಡಿತಾದರೂ...

***

**ಕಥೆಗಾರನ ಟಿಪ್ಪಣಿ:** ಅಪೂರ್ವಳ ಕಥೆಯನ್ನು ಸುಖಾಂತ್ಯಗೊಳಿಸುವುದು ಅಥವಾ ದುಃಖಾಂತ್ಯಗೊಳಿಸುವುದು ನಿಮ್ಮ ಕಲ್ಪನೆಗೆ ಬಿಟ್ಟದ್ದು. ಕಲಾವಿದನ ಕುಂಚದಿಂದ ಅನಿಯಂತ್ರಿತವಾಗಿ ಮೂಡುವ ಚಿತ್ರದಂತೆ, ನದಿಯೊಂದು ತನ್ನ ಪಾತಳಿಯನ್ನು ತಾನೇ ಕೊರೆದುಕೊಳ್ಳುವಂತೆ, ಕಥೆ ತನ್ನ ದಾರಿಯನ್ನು ತಾನೇ ಕಂಡುಕೊಂಡು ಇಲ್ಲಿಯವರೆಗೆ ಬಂದು ನಿಂತಿದೆ. ಹಾಗಾಗಿ ಲೇಖಕ ಇಲ್ಲಿ ಅಸಹಾಯಕ.)

ಪ್ರತಿಕ್ರಿಯಿಸಿ: feedback@sudha.co.in